2-00 P.M.

ಶ್ರೀ ವಿ. ಎಂ. ಘಾಡಿ.—ನಿನ್ನೆ ನಾನೇ ಸ್ವಂತಃ ಜಾಯಿಂಟ್ ಸೆಕ್ರೆಟರಿಯವರನ್ನು ಕರೆದು ಕೊಂಡು ಅವರ ಜೊತೆಯಲ್ಲಿ ಹೋಗಿ ಬಂದಿದ್ದೇನೆ. ಅವರೂ ಸಹ ಇನ್‌ಸ್ಪೆಕ್ಷನ್ ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಆದರೆ ಇದುವರೆಗೆ ಸಾಕಷ್ಟು ಸೌಲಭ್ಯಗಳನ್ನು ನಷ್ಟಕ್ಕೊಳಗಾದವರಿಗೆ ಕೊಟ್ಟಿಲ್ಲ. ಬಾಂಬೂಸ್ ಮತ್ತು ಹಟ್‌ಮೆಂಟ್ ಮೆಟೀರಿಯಲ್‌ಗಳನ್ನು ಇನ್ನೂ ಕೊಟ್ಟಿಲ್ಲ. ಒಂದು ಸಾವಿರ ಬ್ಯಾಂಬುಮ್ಯಾಟ್ಸ್ ಸರಬರಾಜು ಮಾಡಬೇಕೆಂದು ಹೇಳಿದೆ. ಅದನ್ನೂ ಕೂಡ ಕೊಟ್ಟಿಲ್ಲ. ಕೇವಲ 30 ಸ್ಕಾರೀಸ್ ಮತ್ತು 12 ರೂಪಾಯಿಗಳ ಬೆಲೆಯುಳ್ಳ 30 ಕಂಬಳಿಗಳನ್ನು ಕೊಟ್ಟಿದ್ದಾರೆ. 60 ಲಂಗೋಟಗಳನ್ನು ಮಾತ್ರ ಕೊಟ್ಟಿದ್ದಾರೆ. ಇನ್ನು ಯಾವ ತರಹ ಸೌಲಭ್ಯಗಳನ್ನೂ ಕೊಟ್ಟಿಲ್ಲ. ಈ ತರಹ ಗಂಡಸರಿಗೆ ಮತ್ತು ಹೆಣ್ಣುಮಕ್ಕಳಿಗೆ ಸಾಕಾರ್ಯಗಳನ್ನು ಕೊಡುವುದರಿಂದ ಏನೂ ಪ್ರಯೋಜನ ವಾಗುವುದಿಲ್ಲ. ಆದ್ದರಿಂದ ಅವರಿಗೆ ಆದಷ್ಟು ಜಾಗ್ರತೆಯಾಗಿ ಎಲ್ಲ ಸೌಲಭ್ಯಗಳನ್ನೂ ಕೊಡುವುದಕ್ಕೆ ಪ್ರಯತ್ನವಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ತಮ್ಮ ಪ್ರಶ್ನೆಗೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಅಧಿಕಾರಿಗಳಾದವರು ನಮ್ಮ ಸಲಹೆಯಂತೆ ತಕ್ಕ ಕ್ರಮ ತೆಗೆದುಕೊಳ್ಳದಿದ್ದರೆ ನಾನು ತೀವ್ರಗತಿ ಯಿಂದ ಮತ್ತೊಮ್ಮೆ ಎನ್‌ಕ್ವೈರಿ ಮಾಡುತ್ತೇನೆ. ಈಗ ಕೊಟ್ಟಿರುವ ಸ್ಯಾರೀಸ್ ಮತ್ತು ಲಂಗೋಟಿ ಗಳು ಸರ್ಕಾರದ್ದು ಅಲ್ಲ, ಅವು ಪಬ್ಲಿಕ್‌ನಿಂದ ಬಂದಿವೆ. ಇನ್ನು ಮನೆಕಟ್ಟಿಕೊಳ್ಳುವುದಕ್ಕೆ ಬೇಕಾದ ವಸ್ತುಗಳನ್ನು ಕೊಡುವುದಕ್ಕೆ ತ್ವರಿತವಾಗಿ ಅಧಿಕಾರಿಗಳ ಜೊತೆಯಲ್ಲಿ ವ್ಯವಹಾರ ನಡೆಸಿ, ಅಲ್ಲಿನ ಜನತೆಯೊಡನೆ ಸಂಪರ್ಕ ಬೆಳೆಸಿ ಅವರಿಗೆ ಎಲ್ಲ ಸಾಕಾರ್ಯಗಳೂ ದೊರಕುವ ಹಾಗೆ ವ್ಯವಸ್ಥೆಮಾಡಲು ವಿಚಾರಮಾಡುತ್ತೇನೆ.

Leave of Absence to Smt. Sumathi B. Madiman—Grant of

MADAM SPEAKER.—I have received a letter from Smt. Sumathi B. Madiman, Member of the Legislative Assembly, requesting for leave of absence for 15 days owing to private reasons.

Is it the pleasure of the House to grant leave of absence for the Hon. Member for 15 days ?

HON'BLE MEMBERS.—Yes.

The leave to remain absent was granted

Agreement between Tamil Nadu and Mysore on the Cauvery Waters

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ರೂಲ್ 312ನೇ ಪ್ರಕಾರ ನಾನು ಎರಡು ನೋಟೀಸ್‌ಗಳನ್ನು ಕಳುಹಿಸಿದ್ದೇನೆ. ನಿನ್ನೆ ದಿವಸ ಮತ್ತು ಈ ದಿವಸ ಪತ್ರಿಕೆಯಲ್ಲಿ ನಾನು ಓದಿರುವ ಹಾಗೆ ಕಾವೇರಿ ನೀರಿನ ಬಗ್ಗೆ ತಮಿಳುನಾಡಿನಲ್ಲಿ ನಿಮಗೂ ಮತ್ತು ಅವರಿಗೂ ಒಂದು ಒಪ್ಪಂದವಾಗಿದೆ. ಮಾನ್ಯ ಮುಖ್ಯಮಂತ್ರಿಗಳನ್ನು ಅಲ್ಲಿಗೆ ಕರೆಸಿದ್ದರೆಂದು ಪತ್ರಿಕೆಯಲ್ಲಿ ಬಂದಿದೆ. ಆ ವಿಚಾರವೇನಾಯಿತು ?

ಅಧ್ಯಕ್ಷರು.—312ನೇ ರೂಲ್ ಪ್ರಕಾರ ನಾನು ಸೂಕ್ತ ಕ್ರಮವನ್ನು ಅದರ ಬಗ್ಗೆ ತೆಗೆದು ಕೊಂಡಿದ್ದೇನೆ. ಆ ವಿಚಾರವನ್ನು ನಾನು ಅಜೆಂಡಾದಲ್ಲಿ ಸೇರಿಸುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್.—ಮಾನ್ಯ ಮುಖ್ಯಮಂತ್ರಿಗಳು ಎರಡು ಮೂರು ದಿವಸಗಳಿಂದ ಬರುತ್ತಾ ಇಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಅದು ಅಡ್ರೆಸ್ ಆಗಿರುವುದರಿಂದ ಅವರೆ ಉತ್ತರ ಕೊಡಬೇಕು. ಇದು ಬಹಳ ಮುಖ್ಯವಾದ ವಿಷಯ ಎಲ್ಲರಿಗೂ ಸಂಬಂಧಪಟ್ಟ ವಿಷಯ. ಎಲ್ಲರನ್ನೂ ಸೇರಿಸಿ ನಮ್ಮನ್ನು ಕಾನ್‌ಫಿಡೆನ್ಸಿಗೆ ತೆಗೆದುಕೊಳ್ಳಬೇಕು. ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿ ಕೊಡಬೇಕು. ಇನ್ನೊಂದು ವಿಷಯ, ಲೇಬರ್ ಮಂತ್ರಿಗಳಿಗೆ ಸಂಬಂಧಪಟ್ಟುದು.

ಅಧ್ಯಕ್ಷರು.—ಅವರಿಗೂ ಕಾಗದ ಬರೆದಿದ್ದೇನೆ. ಅವರು ಆಸ್ಪತ್ರೆಯಲ್ಲಿದ್ದರು.

ಶ್ರೀ ಎಂ.ಎಸ್. ಕೃಷ್ಣನ್.—ಆಸ್ಪತ್ರೆಯಲ್ಲಿದ್ದವರು ಮದ್ರಾಸಿಗೆ ಹೋಗಿ ಒಂದು ಒಪ್ಪಂದ ವನ್ನು ಮಾಡಿಕೊಂಡು ಬಂದಿದ್ದಾರೆ. 10 ಸಾವಿರ ರೂಪಾಯಿಗಳಷ್ಟು ತೆರಿಗೆಯನ್ನು ಕೊಡು ತ್ತೇವೆಂದು ಒಪ್ಪಂದ ಮಾಡಿಕೊಂಡಿದ್ದಾರೆ. ಅದು ಸರಿಯಾಗಿಲ್ಲವೆಂದು ನಾನು ಹೇಳುತ್ತೇನೆ. ತಮಿಳುನಾಡಿಗೆ ಹೇಗೆ ಹೋಗಿ ಬಂದಿದ್ದಾರೆ. ಶವ ಪರೀಕ್ಷೆ ಮಾಡಿದ ಹಾಗೆ ಇವರು ಮಾಡಿದರೆ ಏನಾಗುತ್ತದೆ. ಮಾನ್ಯ ಶ್ರೀ ಚನ್ನಬಸಪ್ಪನವರು ಎಲೆಕ್ಟ್ರಿಸಿಟಿ ಕೊಡುವುದಿಲ್ಲ, ನೀರು ಕೊಡುವುದಿಲ್ಲ, ಇವರು ಅಲ್ಲಿ ಹೋಗಿ ಒಂದು ಅಗ್ರಿಮೆಂಟ್ ಮಾಡಿಕೊಂಡು ಬಂದಿದ್ದಾರೆ. ಅವರಿಂದ ಸಮಂಜಸ ವಾಗಿ ಉತ್ತರ ಬೇಕು.

Drought Conditions in Arsikere Taluk

ಶ್ರೀ ಎಚ್.ಎಸ್. ಸಿದ್ದಪ್ಪ (ಅರಸೀಕೆರೆ).—ಅರಸೀಕೆರೆ ತಾಲ್ಲೂಕಿನಲ್ಲಿ ಮಳೆ ಬೆಳೆ ಸಾಕಷ್ಟು ಆಗದೆ ಡ್ರಾಟ್ ಕಂಡೀಷನ್ ಆಗಿದೆ. ಆದ್ದರಿಂದ ಅಲ್ಲಿ ಕ್ಷಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡು ಕಂದಾಯ ವಸೂಲಿಮಾಡುವುದನ್ನು ಮುಂದಕ್ಕೆ ಹಾಕಿ ಎಂಬುದಾಗಿ ಕೇಳಿಕೊಳ್ಳುತ್ತೇನೆ. ನಾನು ಈ ಅಧಿವೇಶನ ಪ್ರಾರಂಭವಾದಾಗಿನಿಂದ ಸುಮಾರು 10 ಕಾಲ್ ಅಟೆನ್ಷನ್ ನೋಟೀಸ್‌ಗಳನ್ನು ಕಳುಹಿಸಿದ್ದೇನೆ. ಇದುವರೆಗೆ ಕೇವಲ ಒಂದೇ ಕಾಲ್ ಅಟೆನ್ಷನ್ ನೋಟೀಸ್ ಬಂದಿದೆ. ಹೋದಸಾರಿ 5 ಕಾಲ್ ಅಟೆನ್ಷನ್ ನೋಟೀಸ್‌ಗಳನ್ನು ಕೊಟ್ಟಿದ್ದಕ್ಕೆ ಒಂದೂ ಬರಲಿಲ್ಲ.

ಅಧ್ಯಕ್ಷರು.—ಈಗ ಸರ್ಕಾರಕ್ಕೆ ಹೋಗಿರುವ ಕಾಲ್ ಅಟೆನ್ಷನ್ ನೋಟೀಸ್‌ಗಳಲ್ಲಿ ಐದಾರು ಈಗಾಗಲೇ ಬಂದಿವೆ.

Speaker's Observation about taking up Call Attention Notices every day

ಶ್ರೀ ಸಿ. ಬೈರೇಗೌಡ.—ಕೋಲಾರ ಜಿಲ್ಲೆಯೊಳಗೆ ಕೆಲವು ಮನೆಗಳಿಗೆ ಬೆಂಕಿ ಬಿದ್ದಿದೆ ಎಂದು ನಾನು ಒಂದು ಕಾಲ್ ಅಟೆನ್ಷನ್ ನೋಟೀಸ್ ಕಳುಹಿಸಿದ್ದೇನೆ. ಅದರ ಬಗ್ಗೆ ಏನಾಯಿತೋ ಗೊತ್ತಿಲ್ಲ.

ಅಧ್ಯಕ್ಷರು.—ರೂಲ್ಸ್ ಪ್ರಕಾರ ನಾನು ಒಂದೇ ಕಾಲ್ ಅಟೆನ್ಷನ್ ನೋಟೀಸನ್ನು ಪ್ರತಿ ಯೊಬ್ಬರಿಂದ ತೆಗೆದುಕೊಳ್ಳಬೇಕು. ಸದಸ್ಯರುಗಳಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು 3-4 ಕಾಲ್ ಅಟೆನ್ಷನ್ ನೋಟೀಸ್‌ಗಳನ್ನು ತೆಗೆದುಕೊಂಡರೂ, ಇಷ್ಟು ಜಾಗ್ರತೆಯಾಗಿ ಎಲ್ಲದಕ್ಕೂ ಜವಾಬು ತರಿಸಿಕೊಡಬೇಕಾದರೆ, ಸ್ವಲ್ಪ ಸಮಯ ಬೇಕಾಗುತ್ತದೆ. ಮುಂದೆ ಅನೇಕ ಡಿಮ್ಯಾಂಡುಗಳು ಬರುತ್ತವೆ ಆಗ ಮಾನ್ಯ ಸದಸ್ಯರು ಮಾತನಾಡಬಹುದು. ಇಲ್ಲದಿದ್ದರೆ ಒಂದು ದಿವಸ ಪೂರ್ತಿಯಾಗಿ ಕಾಲ್ ಅಟೆನ್ಷನ್ ನೋಟೀಸ್ ಡೆ ಎಂಬುದಾಗಿಯೇ ಮಾಡಬೇಕಾಗುತ್ತದೆ. ತಮಗೆ ಅನುಕೂಲಮಾಡಿ ಕೊಡಬೇಕೆಂದು ನಾನು ಅದಷ್ಟು ಜಾಗ್ರತೆಯಾಗಿ ಅದರ ಬಗ್ಗೆ ಪ್ರಯತ್ನ ಮಾಡುತ್ತೇನೆ.

Replies due to Questions etc.

ಶ್ರೀ ಸಿ. ಬೈರೇಗೌಡ.—ನಮ್ಮ ಪ್ರಶ್ನೆಗಳಿಗೆರ್ಲಾ ಮಂತ್ರಿಗಳೇ ಉತ್ತರ ಕೊಡುವ ಹಾಗೆ ತಾವು ವ್ಯವಸ್ಥೆಮಾಡಬೇಕು. ಏಕೆಂದರೆ ಬಹಳ ಮುಖ್ಯವಲ್ಲದ ಸಬ್ಜೆಕ್ಟ್‌ನ್ನು ಕಳುಹಿಸುವ ಅಭ್ಯಾಸವೂ ಕೆಲವರಿಗೆ ಇದೆಯೆಂದು ಮಂತ್ರಿಗಳು ಹೇಳಬಹುದು. ಕಾಲ್ ಅಟೆನ್ಷನ್ ನೋಟೀಸ್ ಕಳುಹಿಸುವವರ ದೃಷ್ಟಿಯಲ್ಲಿ ಎಲ್ಲವೂ ಮುಖ್ಯವಾಗಿರುತ್ತದೆ. ಆದ್ದರಿಂದ ಅದನ್ನು ವಿಚಾರಮಾಡಿ ನೋಡಬೇಕು. ನಾನು ಕಳುಹಿಸಿರುವುದು ಒಂದೇ ಒಂದು ಕಾಲ್ ಅಟೆನ್ಷನ್ ನೋಟೀಸ್. ಅದನ್ನು ಕಳುಹಿಸಿ ಈಗ ಒಂದು ತಿಂಗಳು ಆಗಿದೆ. ಅದು ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಅದನ್ನು ತಾವು ತೆಗೆಸಿ ನೋಡಿ ಎಂಬುದಾಗಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು—ಅದನ್ನು ವಿಚಾರ ಮಾಡುತ್ತೇನೆ.